ಹಾಕಿ 'ಬಂತು ನೋಡ್ರಿಲೇ ಎಳೆ ನಿಂಬಿಕಾಯಿ" ಎಂದು ಛೇಡಿಸಿ ಗಣ್ಣಮಕ್ಕಳು ನಗುತ್ತಿದ್ರು. ಊರು ನಟ್ಟನಡುವ ಗಣ್ಸರ ಮಾತಿಗೆ ನೆದ್ರು ಕೊಡದೇ ತಲಿ ತಗ್ಗಿಸಿಕೊಂಡು ಪಾರಿ ಮನಿ ಸೇರಿಕೇಸಿ ದುಃಖಿಸುತ್ತಿದ್ಳು. 'ಉಣು ಬಾರಲೇ ಯವ್ವಾ' ಎಂದು ಗೌರವ್ವ ಎಷ್ಟೇ ಜುಲುಮಿಲಿ ಜೀರಿಗಿ ಹರಿದ್ರೂ ಏಳುತ್ತಿರಲ್ಲಿಲ್ಲ. ಮಗಳ ಸಂಕ್ಟ ಅರಿತಿದ್ದ ಗೌರವ್ವ, ಪಾರಿ ಸಂಗಡ ಕೂಳಿಲ್ಲದೆ ನೀರಿಲ್ಲದೆ ಮಕ್ಕಂತಿದ್ಳು. ಕಂಡಕಂಡ ದ್ಯಾವ್ರಿಗೆ ಕೈ ಮುಗುದು ಬೂದಿ, ಭಂಡಾರ ತಂದಚ್ಚಿಕ್ಕೇಸಿ ಡುಬ್ಬ ಚೆಪ್ಪರಸಕಿ. ಊರು ಮಂದಿನ ಕೇಳಿ ವಿಚಾರಸತ್ತಿದ್ಳು. ಶ್ಯಾಣೆರನ್ನ ಹುಡುಕಿ ದುಂಬಾಲು ಹತ್ತಾಕಿ. ಹೆತ್ತು ಕಳ್ಳು ಕಣ್ಣೀರು ಹಾಕದು ನೋಡಲಾರದೆ ರಮಿಸಿ ಮೆಲ್ಲಕ್ ತೊಡಿಮ್ಯಾಗ ಮಕ್ಕಿಸಿಕೊಂಡು 'ಅಂತಾರಲೇ ಯವ್ವಾ, ಅಂತಾರ ಆಡ್ತಾರ ಅಂದ್ರ ಹ್ಯಾಂಗ, ದ್ಯಾವ್ರು ಇವತ್ತಲ್ಲ ನಾಳಿ ಒಳ್ಳೆದು ಮಾಡ್ತಾನವ' ಮಗಳ ತಲಿಮ್ಯಾಗ ಸವರಿ ಬೆನ್ನಿಗಿ ಆಸ್ರಾಗಿ ನಿಲ್ಲಾಕಿ. ತಿಪ್ಲದಾಗ ಸಂಸಾರದಾಗ ಒಮ್ಮೊಮ್ಮಿ ಬ್ಯಾಸರಕಿಯಾಗಿ, ಮಂದಿ ಅಂದದ್ದು ಆಡಿದ್ದು ಕೇಳಿ ತಲಿ ರೋಸಿಗೇಸಿ 'ನೀ ಚಂದ ಇದ್ರ ಹಿಂಗ್ಯಾಕ ಆಗ್ತಿತ್ತಲೇ ಸನ್ನೇಸಿ ಸೂಳಿ, ಬಂದು ವರಗಳಾದ್ರು ಯಾಕ್ ಹಿಂದಕ್ ಸರಕಂತಿದ್ರು? ಮಂದ್ಯಾದ್ರ ಯಾಕ್ ಆಡ್ತಾರ, ಕುಂಡಿ ತುಂಬ್ಯಾದೇನ್ ಅನ್ನದ್ಕ ಆಡದ್ಕ' ಗೌರವ್ವ ತಲಿಕೆಟ್ಟಾಕಿ ಹೊದ್ರಿದಂಗ್ ದಮ್ಮತ್ತಂಗ್ ಹೊದ್ರಿ ಗಪ್ಪಾಗಕಿ. ಅಂದು ತಿಪ್ಲಿಗೆ ಕಣ್ಣೀರು ಸುರಿಸಿ ಹಗುರಾಗಕಿ.

ಹದಿನೈದು ದಿನದಿಂದ ಬಿಸಿಲೆಂಬುದು ಬೀಳದೆ ಮುಚ್ಚಿದ ಮಾಡ ಮುಚ್ಚಿದಂಗಿದ್ದು ಜಿಟಜಿಟಿ ಮಳಿ ಭೂಮಿಗೆ ಬಿಡದೇ ಸುರಿಯುತ್ತಿತ್ತು. ಕೈಯಿಗೆ ಬಂದ ಬೆಳಿಗಳಿಗೆ ಎಣ್ಣಿ ಗೊಬ್ಬರ ಕೊಡದಕ್ಕೆ ಮಳಿಯೊಂದು ಅಡ್ಡಿಯಾಗಿತ್ತು. ವಾರಿಗಿ ಗೆಳತಿಯರ ಸಂಗಡ ಸೇರಿಕೊಂಡು ಒಮ್ಮಿ ಪಾರಿ ಊರಿನ ಯಜಮಾನ್ರ ಹೊಲದನ ದವತಿಗೆ ಹೋಗಿದ್ಳು. ಪಾರಿ ಜತ್ಯಾಗ ಲಚ್ಚಿನು ಇದ್ಳು. ಹಿಡಕೊಂಡ ಸಾಲು ಮುಂದು ನೋಡೆ ಕೆಲಸ ಮಾಡುತ್ತಿದ್ದಾಗ ಮಾತು ಮಾತಿಗೆ ಬೆಳೆದು ಗುಂಪು ಗುಂಪಾದವು. ಮೊದಲಿನಿಂದಲೂ ಪಾರಿ ಲಚ್ಚಿ ಒಂದು ಕಡಿಗಿಯಾದ್ರೆ, ಮಲ್ಲವ್ವನ ಗುಂಪು ಒತಟಿಯಾಗಿತ್ತು. ಗುಂಪು ಗುಂಪಾಗಿದ್ದಾಗ ಎದ್ರು ಗುಂಪಿನ ಮಲ್ಲವ್ವ ಎಂಬಾಕಿ 'ನಿಂದೇನ್ ಹೇಳತ್ತಿಯಲೇ ನಿಂಬಿಕಾಯಿ' ಎಂದುಕೇಸಿ ಹಲ್ಲು ಕಿಸಿಕಿಸಿದು ಸುಮ್ಮಾದಳು. ಒಂದು ಕ್ಷಣ ಅವರಲ್ಲೇ ತಲ್ಲಣ ಮೂಡಿಸಿತು. ಇನ್ನುಳಕಂಡ ವಾರಿಗಿ ಹೆಂಗಸರು ಪಾರಿ ಮಾರಿಯನ್ನು ಕಣ್ಣು ಬಡಿಲಾರದಂಗ ನೋಡಿಕೇಸಿ ಒಬ್ಬರಿಗೊಬ್ಬರ ಮಾರಿ ನೋಡಿಕೊಂಡು ನಕ್ಕು ತಬ್ಬಿಬ್ಬಾದರು. ಪಾರಿ ಒಮ್ಮಿ ಎಲ್ಲರನ್ನು ದಿಟ್ಟಿಸಿ ನೋಡಿ 'ಹೌದಲೇ ಕಂತ್ರಾಟಿ ಸೂಳೇರ ನಿಂಬಿಕಾಯಂಗ ಅದಾವಲ, ನಿನ್ನವು ಬಲ್ತು ಕುಂಬಳಕಾಯಿ ಆಗ್ಯಾವ ಅಲಾ, ಯಾವನಿಗೇನಾಟ ಕೈಯಾಗ ಕೊಡು ಹಿಡಕೊಂಡು ಚಂಡಾಟ ಆಡ್ತಾರ ಚಂಡಾಟ, ಥೂ ನಿನ್ನಾ ಸಣ್ಣಾತಿ ಸೂಳೇರ' ಎಂದು ಪಾರಿ ಅಡಿವಿ ಆರ್ಯಾಣ ನೋಡದೆ ಮೈಯಾಗ ಗಾಳಿ ಒಕ್ಕಂಡವಳಂತೆ ಸಿಟ್ಟಿಗಿ ಬಂದು ಜಾಡಿಸುತ್ತಿದ್ಳು. ಪಾರಿಗೆ ಇನ್ನಿಲ್ಲದ ಸಂಕಟ ಕುತ್ತಿಗೆ ಬಂದಿತ್ತು. ವಾರಿಗೇರ ಮುಂದ ತನ್ನ ಬದುಕು ನಗುಬಟ್ಟಲ ಆದಂಗ ಆತಲ್ಲ ಎಂದೆನಿಸಿ ನೊಂದುಕೊಳ್ಳುತ್ತಿದ್ಳು. ಲಚ್ಚಿ ಆಕೆಯ ಬೆನ್ನಿಗೆ ನಿಂತು ದನಿ ಕೊಟ್ಟಳು. ಮಂದಿನ ನೋಡದೇ, ಮಾರಿ ನೋಡದೇ ಮಲ್ಲವ್ವ ಅನುಬಾರದು ಪಾರಿಗಂದು ನಗುತಿದ್ಳು. ಏನೇ ಅಂದ್ರೂ ಆಡಿದ್ರೂ ಅವ್ರ ಮಾತಿಗೆ ಗಟ್ಟಿ ಮನಸ್ಸಿನಿಂದ ಎದರೇಟು ನೀಡಿದ್ರೂ ಚಿಂತ್ಯಾಕ ಅದರ ಬಗ್ಗೆನೇ ದಿನವಿಡೀ ಕೊರಗುವುದಂತು ನಿಜ ಆಗಿತ್ತು.

* * *

ಪಾರಿ ಯೌವ್ವನದ ಬೊಗಸ್ಯಾಗ ಆಸೆಗಳು ದಿನ ದಿನಕ್ಕ ಉಕ್ಕಿ ಆಕೆಯನ್ನು ಸಂಕಟಕ್ಕೆ ಸಿಲುಕಿಸುತ್ತಿದ್ವು. ವಾರಿಗೆ ಗೆಳತಿಯರ ಈಡು ಜೋಡು ನೋಡಿಕೇಸಿ ಕೊರಗಿ ಕೊರಗಿಕೆಂತ ಕೂಡಕತ್ತಿದ್ಳು. ಯಾರಿಗೂ ಹೇಳಲಾರದಂತ ಹೀಗಿಗ ಮನಸ್ಸಿಗಿ ಚಿಂತಿ ಹತ್ತಿತ್ತು. ವಸ್ತಾಗಿ ಕಂಡ ಗಂಡಹೆಣ್ತೆಯರನ್ನ ಒಂದೇ ಸವನೆ ಬಿರುಗುಟ್ಟಿ ನೋಡಾಕಿ. ನಿಂತಲ್ಲೇ ಕಾಲಿನಿಂದ ನೆಲ ತೋಡಾಕಿ. ಪಾರಿಗೆ ಮಲ್ಲನ ಮ್ಯಾಗ ಒಮ್ಮಿ ಮನಸ್ಸಾದ್ದದ್ದು, ಆತನ ತೋಳಿನ ತೆಕ್ಕ್ಯಾಗ ಬಿದ್ದು ಕೊಂಕಳಿನ ಬೆವರನ್ನು ಮೂಸಬೇಕೆಂದು ಹುಟ್ಟಿದ ಬಯಕೆ ಆಕೆಯ ಮನಸ್ಸನ್ನು ನಡುಗಿಡಿಸುತ್ತಿತ್ತು. ಆತನ ಮೈಕಟ್ಟು, ವರಸೆ ನೋಡಿ ಆಕೆಗೇನೇ ಚೂರು ತಿಳಿಯದೇ ಆತನ ಆಲಿಂಗನಕ್ಕಾಗಿ ಪಾರಿ ದೇಹ ಒಂದೇ ಸವನೆ ಆತುರಪಡುತ್ತಿತ್ತು. ಪಾರಿ ನಿತ್ರಾಣಿಗಿ